SC No.96/2021
CW-06 / PW-04

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 96/2021

ಚಾ.ಸಾಃ 06 ಪ್ರಾ.ಸಾಃ 04

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 21.02.2026

| | | |
|---|---|---|
| ಸಾಕ್ಷಿಯ ಹೆಸರು | : | ಬಸವರಾಜ |
| ತಂದೆಯ ಹೆಸರು | : | ತಿಪ್ಪಣ್ಣ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಹಮಾಲಿ |
| ವಿಳಾಸ | : | ಮಾನ್ವಿ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರಿ ಸರಕಾರಿ ಅಭಿಯೋಜಕರಿಂದಃ**

ಈಗ ಐದು ವರ್ಷಗಳ ಹಿಂದೆ ಪೋಲಿಸರು ಮಾಡಗಿರಿಯಲ್ಲಿ ಗುನ್ನೆ ಸ್ಥಳದಲ್ಲಿ ನನ್ನ ಸಮಕ್ಷಮ ಮಹಜರ ಮಾಡಿದರು. ಮಹಜರಿಗೆ ನಾನು ಸಹಿ ಮಾಡಿದೆನು. ಸ್ಥಳದಲ್ಲಿ ಪೋಟೋ ತೆಗೆದರು. ಸಾಕ್ಷಿಯು ಗುರುತಿಸಿದ ಸ್ಥಳ ಮಹಜರನ್ನು **ನಿಪಿ.೨** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.೨(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಗುರುತಿಸಿದ **ಪೋಟೋವನ್ನು ಸರ್ಟಿಫಿಕೇಟ್ ಹಾಜರು ಪಡಿಸುವ ಷರತ್ತಿನೊಂದಿಗೆ ನಿಪಿ.೨(ಬಿ)** ಎಂದು ಗುರುತಿಸಲಾಯಿತು.

(ಸಾಕ್ಷಿಯನ್ನು **ಭಾಗಶಃ** ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿಸಲಾಯಿತು).

**ಮಾನ್ಯ ಪ್ರಭಾರಿ ಸರಕಾರಿ ಅಭಿಯೋಜಕರಿಂದ ಪಾಟೀ ಸವಾಲು:-**

02. ಸ್ಥಳದಲ್ಲಿ ತನಿಖಾಧಿಕಾರಿ ಸೀರೆಯನ್ನು ವಶಪಡಿಸಿಕೊಂಡರು ಎನ್ನುವುದು ನಿಜ. ಸಾಕ್ಷಿಯು ಮು.ಮಾ.1 ರ ಸೀರೆಯನ್ನು ನೋಡಿ ಗುರುತಿಸಿರುತ್ತಾರೆ.

**ಆರೋಪಿತರ ಪರ ಶ್ರೀ ಎಸ್.ಕೆ ವಕೀಲರಿಂದ ಪಾಟೀ ಸವಾಲು:-**

03. ನನ್ನ ಊರು ಮಾನ್ವಿ ನಾನು ಮಾನ್ವಿಯಲ್ಲಿಯೇ ಇರುತ್ತೇನೆ. ಮೃತ ಅಮರಮ್ಮ ನನಗೆ ಸಂಬಂಧಿಕಳು. ಮಹಜರ ಸಾಕ್ಷಿಯಾಗಲು ನನ್ನ ಮಾಮನ ಮಗ ಲಿಂಗಪ್ಪ (ಚಾಸಾ-1) ಕರೆದನು. ವಶಪಡಿಸಿಕೊಂಡ ಸೀರೆ ಮಿಂಚಿನ ಕಲರ್ ಇತ್ತು. ಪೋಲಿಸರು ಮಹಜರ ಮಾಡುವಾಗ ಸೀರೆ ವಶಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

04. ಮಹಜರ ಮಾಡಲು ಪೋಲಿಸರು ನನ್ನನ್ನು ಯಾವಾಗ ಕರೆದರು ಎಂದು ದಿನಾಂಕ ಹೇಳಲಾಗುವುದಿಲ್ಲ. ಮಹಜರ ಮಾಡಿದ ಸಮಯ ಹೇಳಲಾಗುವುದಿಲ್ಲ. ಮಹಜರ ಮಾಡುವಾಗ ನಾನು, ಪಿ.ಎಸ್.ಐ ಹಾಗೂ ಇತರೆ ನಾಲ್ಕು ಜನರು ಇದ್ದೆವು, ಇತರರ ಹೆಸರು ಹೇಳಲಾಗುವುದಿಲ್ಲ. ಸದರಿ ಮಹಜರನ್ನು ಮನೆಯಲ್ಲಿ ಮಾಡಿದ್ದಾರೆ. ಸದರಿ ಮನೆಯಲ್ಲಿ ಒಂದು ಅಡುಗೆಮನೆ, ಒಂದು ಹಾಲ್ ಇರುತ್ತವೆ. ಸದರಿ ಮನೆಯ ಹಾಲ್ ನಲ್ಲಿ ಮಹಜರ ಮಾಡಿದ್ದಾರೆ. ಸದರಿ ಮನೆಯ ಹಾಲ್ ನಲ್ಲಿ ಏನೂ ಇದ್ದಿಲ್ಲ. ನಿಪಿ.9 ರ ಮಹಜರದಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಮಹಜರನ್ನು ಎಲ್ಲಿ ಬರೆದಿದ್ದಾರೆ ಎಂದು ಗೊತ್ತಿಲ್ಲ ಎನ್ನುವುದು ನಿಜ. ಚಾಸಾ-1 ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎನ್ನುವುದು ನಿಜ. ಯಾವ ಕಾರಣಕ್ಕಾಗಿ ಪೋಟೋ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.